ಆದರೆ ಪ್ರಮುಖವಾಗಿ ಈ ಚಾಮುಂಡೇಶ್ವರಿ ಬಿಲ್ಡರ್ಸ್ ..... ನಾನೇನೋ ಒಂದು ಸಾವಿರ ಎಕರೆ ಜಮೀನಿನಲ್ಲಿ ..... ಒಂದು ನಿಮಿಷ ಅದಕ್ಕೆ ದಾಖಲೆ ಕೊಡುತ್ತಿದ್ದೇನೆ. ಗೋಮಾಳ, ಗುಡ್ಡಗಳು ಆಕ್ರಮಿಸಿಕೊಂಡಿದ್ದಾರೆ ಎಂದು ನಾನು ಹೇಳಿದೆ. ಆಗ ಒಂದು ಪ್ರಶ್ನೆಯನ್ನು ಎತ್ತಿದರು ಕಾನೂನು ಬಾಹಿರವಾದಂಥ ಕೆಲಸವನ್ನು ನಾವೇನಾದರೂ ಮಾಡಿದ್ದೇವೆಯೇ ಎಂದು. ಮಾನ್ಯ ಅಧ್ಯಕ್ಷರೇ, ಈ ಬಿ.ಎಂ.ಆರ್.ಡಿ.ಎ. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಏನಿದೆ ಕಾಯಿದೆ ಪ್ರಕಾರ ವಸತಿ ಸಮುಚ್ಛಯ ಯಾರಾದರೂ ಮಾಡಬೇಕಿದ್ದರೆ ಬಿ.ಎಂ.ಆರ್.ಡಿ.ಎ. ಅನುಮತಿಯನ್ನು ಪಡೆಯಬೇಕಾಗುತ್ತದೆ. ಇದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿಗೆ ಇದು ಸೇರುತ್ತದೆ. ಈ ಚೌಕಟ್ಟಿಗೆ ಬರುತ್ತದೆ. ಗ್ರಾಮಪಂಚಾಯಿತಿಯ ಅಧ್ಯಕ್ಷ, ಕಾರ್ಯದರ್ಶಿ ಈ ನಕ್ಷೆಗಳಿಗೆ ಅನುಮೋದನೆ ಮಾಡಿ ಕೊಟ್ಟಿದ್ದಾರೆ ಉಪಾಧ್ಯಕ್ಷರೇ, 1000 ಕೋಟಿ ರೂಪಾಯಿ ಬೆಲೆ ಬಾಳುವಂಥ .....

2) ಪ್ರಕಟಣೆ.

ಉಪಾಧ್ಯಕ್ಷರು : ಒಂದು ನಿಮಿಷ ಇರಿ, ಒಂದು ಪ್ರಕಟಣೆ ಇದೆ. ಇಂದು ಮಧ್ಯಾಹ್ನ ಸುಮಾರು 1-10 ಗಂಟೆ ಸಮಯದಲ್ಲಿ ಕರ್ನಾಟಕ ರಾಜ್ಯ ರೈತಸಂಘ, ಮೈಸೂರು ಜಿಲ್ಲಾ ಶಾಖೆಯ ಶ್ರೀ ಸದ್ಗುರು, ಶ್ರೀ ಬಸವರಾಜು, ಶ್ರೀ ಹೆಚ್. ಸುರೇಶ್, ಶ್ರೀ ಮಲ್ಲಪ್ಪ, ಶ್ರೀ ನಂಜುಂಡಸ್ವಾಮಿ ಹಾಗೂ ಶ್ರೀ ಎಸ್. ಪ್ರಕಾಶ್ ಅವರುಗಳು ಸದನದ ಪ್ರೇಕ್ಷಕರ ಗ್ಯಾಲರಿಯಿಂದ ಘೋಷಣೆಗಳನ್ನು ಕೂಗಿ ಸದನದ ಕಲಾಪಕ್ಕೆ ಅಡ್ಡಿಯುಂಟು ಮಾಡಿರುತ್ತಾರೆ. ಇವರುಗಳನ್ನು ಪಹರೆ ಮತ್ತು ನಿಗಾವಣೆ ಶಾಖೆಯವರು ತಮ್ಮ ವಶಕ್ಕೆ ತೆಗುದುಕೊಂಡು ವಿಧಾನಸೌಧದ ಪೋಲೀಸ್ ಠಾಣೆಯವರ ವಶದಲ್ಲಿಟ್ಟಿರುತ್ತಾರೆ. ಅವರುಗಳು ಸದನಕ್ಕೆ ತೀವ್ರ ಸ್ವರೂಪದ ಅಪರಾಧಗಳನ್ನು ಮಾಡಿರುವುದರಿಂದ ಈ ಮೇಲ್ಕಾಣಿಸಿದವರಿಗೆ ಶಿಕ್ಷೆಯನ್ನು ವಿಧಿಸಿದ್ದು ಇಂದು ಅವರು ಸದನವು ಮುಗಿಯುವವರೆಗೆ ವಿಧಾನಸೌಧದ ಪೋಲೀಸ್ ಕಸ್ಟಡಿಯಲ್ಲಿರಬೇಕೆಂದು ಆದೇಶಿಸುತ್ತೇನೆ. ತಾವು ಮುಂದುವರೆಸಿ.

3) ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ರೈತರು ಕೂಲಿಕಾರರು ಒದ್ದಾಡುತ್ತಿರುವಂಥ ಸಂದರ್ಭದಲ್ಲಿ ಪ್ರತಿಭಟನೆ ಮಾಡಿದ್ದಾರೆ.

ಉಪಾಧ್ಯಕ್ಷರು : ಆಯಿತು, ಎಲ್ಲಾ ಗೊತ್ತಿದೆ. ಅವರು ಮಾತನಾಡಲಿ. ಈಗ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಅವರನ್ನು ಬಿಡುಗಡೆ ಮಾಡಿ. ಬೇರೆ ಇನ್ನೇನೂ ಇಲ್ಲ. ನಾನು ಮನವಿ ಮಾಡಿಕೊಳ್ಳುತ್ತೇನೆ ಇಡೀ ರಾಜ್ಯದ ರೈತರ ಪರವಾಗಿ ಅವರ ನೋವನ್ನು ನಿಮ್ಮ ಗಮನಕ್ಕೆ ತಂದಿದ್ದಾರೆ. ದಯವಿಟ್ಟು ಅವರನ್ನು ಬಿಡುಗಡೆ ಮಾಡಿ.

ಉಪಾಧ್ಯಕ್ಷರು : ಆಯಿತು. ಈಗ ಅವರು ಮಾತನಾಡಲಿ.